# 9

# ಶ್ರೇಷ್ಠನಾದ ನಮ್ಮ ಮಹಾಯಾಜಕ

# (4:14-5:10)

"ಮಹಾಯಾಜಕ" ಎಂಬದೇ ಇಬ್ರಿಯ ಪತ್ರಿಕೆಯ ಪ್ರಮುಖ ಪ್ರಸ್ತಾಪವಾಗಿದೆ. ಆ ಮಹಾಯಾಜಕನು ಯೇಸುವೇ ಎಂಬುದಕ್ಕೆ ಅನೇಕ ವಾಕ್ಯಗಳನ್ನು ನೋಡಿದ್ದೇವೆ (2:17; 3:1). ಆತನು ಲೇವಿಯ ಕುಲದ ಯಾಜಕನಾದ ಅರೋನನಿಗಿಂತಲಾ ಶ್ರೇಷ್ಠನಾಗಿದ್ದಾನೆ. ಈ ಹಿಂದೆಯು ಸಹ ಯೇಸು ಅನುತಾಪವಿರುವ ಯಾಜಕ ಎಂದು ಅಧ್ಯಯನ ಮಾಡಿದ್ದೇವೆ:

> ಆಕಾಶಮಂಡಲಗಳನ್ನು ದಾಟಿಹೋದ ದೇವ ಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ. ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪ ವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ. ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (4:14-16).

4:14 ರಲ್ಲಿ, "*ಶ್ರೇಷ್ಠ ಮಹಾಯಾಜಕನು* ಎಂದು ಬರೆದದೆ, ಆತನನ್ನು ದೇವ ಕುಮಾರನಾದ ಯೇಸು ಎಂದು ಹೇಳಲಾಗಿದೆ" (ಒತ್ತಿ ಹೇಳಿದ್ದು ನನ್ನದು). ಇಬ್ರಿಯ 10:21ರಲ್ಲಿ, ಯೇಸುವನ್ನು ಶ್ರೇಷ್ಟನಾದ ಮಹಾಯಾಜಕನು[1] ಎಂದು ಕರೆಯಲಾಗಿದೆ. ಯೇಸು ಮಹಾಯಾಜಕನೇ[2] ಯಾಕಂದರೆ ...

- *ಆತನು ಆಕಾಶಮಂಡಲಗಳನ್ನು ಹಾದುಹೋದನು* (4:14). ಸ್ಥಳೀಯವಾಗಿ ಜೀವಿಸಿದ್ದ ಮಹಾಯಾಜಕನು, ಭೂಮಿಗೆ ಸಂಬಂಧಪಟ್ಟ ದೇವಾಲಯದ ಅತಿಪರಿಶುದ್ಧವಾದ ಸ್ಥಳಕ್ಕೆ ಪ್ರವೇಶ ಮಾಡುತ್ತಿದ್ದನು. ("ಮಹಾಪರಿಶುದ್ದ"; NIV) ಆದರೆ ಯೇಸು ಪರಲೋಕದೊಳಗೆ ಹೋದನು (9:24).
- *ನಮ್ಮ ನಿರ್ಬಲಾವಸ್ಥೆಯಲ್ಲಿ ಆತನು ಅನುತಾಪಪಡುತ್ತಾನೆ* (4:15). ಲೋಕಕ್ಕೆ ಸಂಬಂಧಪಟ್ಟ ಯಾಜಕನಲ್ಲಿ ಈ ಗುಣಗಳಿರಲಿಲ್ಲ.
- *ಆತನು ಪಾಪ ರಹಿತನಾಗಿದ್ದನು* (4:15). ಆದರೆ ಲೋಕದ ಯಾಜಕನು ಪಾಪಿಯಾಗಿದ್ದನು (ನೋಡಿರಿ 5:3).
- ಆತನು *ಕೃಪಾಪೂರ್ಣನು ಲೌಕಿಕ ಯಾಜಕನು* ನಿಯಮಗಳನ್ನು ನೀಡಿ, ತೀರ್ಪನ್ನು ಮಾಡುತ್ತಿದ್ದನು, ಆದರೆ ಕೃಪೆಯನ್ನು ನೀಡಲು ಸಾಧ್ಯವಿರಲಿಲ್ಲ. "ಯೇಸು ಸಮಯೋಚಿತವಾದ ದಯೆಯನ್ನು ನೀಡುತ್ತಾನೆ" (4:16).

ಆತನು ಮಹಾಯಾಜಕನು ಎಂಬುದಕ್ಕೆ ಇಬ್ರಿಯ 5:1-10 ರಲ್ಲಿ ಹೆಚ್ಚಿನ ಕಾರಣವನ್ನು ನೀಡಲಾಗಿದೆ - ಆತನು ಲೋಕದ ಸಕಲ ಯಾಜಕರಿಗಿಂತ ಮಿಗಿಲಾದವನೇ.[3] (ಈ ವಿಚಾರವನ್ನು ಮುಂದಿನ ಪಾಠದಲ್ಲಿ ತರ್ಕಿಸೋಣ.) ಇದು ಈ ಪುಸ್ತಕದಲ್ಲಿನ ಮೂರನೆಯ


ಚರ್ಚೆಯಾಗಿದೆ, 7:1-10:18, 5:11-6:20 ರಲ್ಲಿ ಯೇಸುವಿನ ಯಾಜಕತ್ವದ ಕುರಿತ ಅಧಿಕವಾದ ಚರ್ಚೆಗಳಿವೆ.

## ಮಹಾಯಾಜಕ

ಇಬ್ರಿಯ ಬರಹಗಾರನು ಯೇಸುವನ್ನು ಮಹಾಯಾಜಕ ಎಂದು ಹೇಳಿದಾಗ, ಯೆಹೂದ್ಯ ಕ್ರೈಸ್ತರು ಇದರ ಒಳಾರ್ಥವನ್ನು ಅರಿಯಲು ಸಾಧ್ಯವಾಯಿತು; ಆದರೆ ನಮ್ಮಲ್ಲಿ ಅನೇಕರಿಗೆ ಈ ವಿಚಾರವು ಇನ್ನೂ ತಿಳಿದಿರುವದಿಲ್ಲ. ಯಜ್ಞ ಹಾಗೂ ಯಾಜಕರ ವಿಚಾರವು ನಮಗೆ ದೂರವಾಗಿರುವದರಿಂದ, ವೈಯಕ್ತಿಕವಾಗಿ ಅದನ್ನು ಗ್ರಹಿಸುವದು ಕಷ್ಟಕರವೇ. ಇಬ್ರಿಯ ಪತ್ರಿಕೆಯಲ್ಲಿ ಯಾಜಕರ ಕುರಿತು ವಿಸ್ತಾರವಾದ ವಿವರಗಳು ಇದ್ದು, ಅದನ್ನು ನಾವುಗಳು ಅರಿಯಲು ಕಷ್ಟವಾಗಿರುವದರಿಂದ, ಅವುಗಳ ಕುರಿತು ಕೆಲವು ವಿಶ್ಲೇಷಣೆಗಳನ್ನು ಅಂದರೆ ಹಳೆ ಒಡಂಬಡಿಕೆಯಲ್ಲಿನ ಮಹಾಯಾಜಕರ ಕುರಿತ ವಿವರಣೆಯನ್ನು ನೀಡಬೇಕಿದೆ.

**ವಿಶೇಷವಾದ ವಂಶಸ್ಥರು**

ಮೋಶೆಯ ಸಹೋದರನಾದ ಅರೋನನು ಲೇವಿಯ ಕುಲದವನು ಮತ್ತು ಮಹಾಯಾಜಕನು ಆಗಿದ್ದನು. ನಂತರದಲ್ಲಿ ಆರೋನನ ಚೊಚ್ಚಲ ಮಗನು ಯಾಜಕನಾದನು. ಮಹಾಯಾಜಕನ ವೃತ್ತಿಯು ಹಿರೀಮಗನಿಂದ, ಹಿರೀಮಗನಿಗೆ ವರ್ಗಾವಣೆಗೊಳ್ಳುತ್ತಿತ್ತು.[4] ಆರೋನನ ವಂಶಸ್ಥರು ಯಾಜಕ ಸೇವೆ ಮಾಡುವಾಗ, ಲೇವಿಯ ಕುಲದವರು. ಅವರಿಗೆ ಸಹಾಯಕರಾಗಿದ್ದರು.




**ವಿಶೇಷ ಕರ್ತವ್ಯ**

ಮಹಾಯಾಜಕನು ಇಸ್ರಾಯೇಲ್ಯರ ಧಾರ್ಮಿಕ ನಾಯಕನಾಗಿದ್ದನು. ಅರಸರು ಇಲ್ಲದೆ ಇರುವಾಗ, ಅವನು ಜನರ ಮುಖ್ಯ ಆಡಳಿತಗಾರನಾಗಿದ್ದನು.

ಯಾಜಕನಿಗೆ ಕೆಲವು ಸಾಮಾನ್ಯವಾದ ಕರ್ತವ್ಯಗಳಿದ್ದವು (ವಿಮೋಚನಕಾಂಡ 25:30;

27:20, 21; ಯಾಜಕಕಾಂಡ 6:14, 15; 13:2-59; ಧರ್ಮೋಪದೇಶ ಕಾಂಡ 17:12). ಅವನು ಯಾಜಕರ ಉಸ್ತುವಾರಿಯನ್ನು ಹಾಗೂ ಅವರ ಕೆಲಸಗಳನ್ನು ಗಮನಿಸಬೇಕಿತ್ತು.

ಮಹಾಯಾಜಕನಾಗಿ ಅವರು ವಿಶೇಷ ಕೆಲಸಗಳನ್ನು ನಡೆಸಬೇಕಿತ್ತು. ಅವನು ಎದೆ ಕವಚದಲ್ಲಿ ಹನ್ನೆರಡು ಕುಲಗಳ ಹೆಸರನ್ನು ಹೊತ್ತುಕೊಂಡು ದೇವರ ಮುಂದೆ ಬಂದು, ದೇವರಿಗೂ ಮತ್ತು ಇಸ್ರಾಯೇಲ್ಯರ ನಡುವೆ ಮಧ್ಯವರ್ತಿಯ ಕೆಲಸ ಮಾಡಬೇಕಿತ್ತು. ಊರೀಮ್ ಮತ್ತು ತಮ್ಮೀಮ್‌ನ[5] (ನೋಡಿರಿ ವಿಮೋಚನಕಾಂಡ 28:29). ಮೂಲಕ ದೇವರೊಂದಿಗೆ ವಿಚಾರ ಮಾಡಬೇಕಿತ್ತು (ವಿಮೋಚನಕಾಂಡ 28:30) ಅವರು ನಿರ್ಧಾರವನ್ನು ಇಸ್ರಾಯೇಲ್ಯರು ಒಪ್ಪಿಕೊಳ್ಳ ಬೇಕಿತ್ತು (ಅರಣ್ಯಕಾಂಡ 27:20, 21).

### ಒಂದು ವಿಶೇಷವಾದ ದಿನ

ಯಾಜಕರು ಪಾಪ ಪರಿಹಾರದ ದಿನವನ್ನು ಗೊತ್ತುಮಾಡಬೇಕಿತ್ತು. ವರ್ಷಕ್ಕೆ ಒಂದಾವರ್ತಿ, ಆ ದಿನದಲ್ಲಿ ಯಾಜಕನು ತನಗಾಗಿ ಹಾಗೂ ತನ್ನ ಜನರಿಗಾಗಿ ಎರಡು ಯಜ್ಞಗಳನ್ನು ಸಮರ್ಪಿಸಬೇಕಿತ್ತು. ಪಾಪ ಪರಿಹಾರದಕ್ಕಾಗಿ, ಯಜ್ಞದ ರಕ್ತವನ್ನು ತೆಗೆದುಕೊಂಡು ಅತಿಪರಿಶುದ್ಧ ಸ್ಥಳದಲ್ಲಿದ್ದ ಒಡಂಬಡಿಕೆಯ ಮಂಜೂಷದ ಮೇಲೆ ಚಿಮುಕಿಸಬೇಕಿತ್ತು. ಅದನ್ನು ಮಹಾಯಾಜಕನು ಮಾತ್ರ ಮಾಡಬೇಕಿತ್ತು. ಅವನು ವಿಶೇಷವಾದ ದಿನದಲ್ಲಿ, ವರ್ಷಕ್ಕೆ ಒಂದು ಸಾರಿ ಮಾತ್ರ ಅತಿ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸುತ್ತಿದ್ದನು. ಪಾಪ ಪರಿಹಾರದ ದಿನದ ಕುರಿತು ಇಬ್ರಿಯ ಪುಸ್ತಕದಲ್ಲಿ ಅನೇಕ ಬಾರಿ ಉಲ್ಲೇಖಿಸಲಾಗಿದೆ, ಆ ವಿಶೇಷವಾದ ದಿವಸದಲ್ಲಿ ಸಂಭವಿಸಿದ ವಿಚಾರವನ್ನು ನಾವುಗಳು ಅವಲೋಕಿಸಬೇಕು (ನೋಡಿರಿ ಯಾಜಕಕಾಂಡ 16).

## ಮಹಾಯಾಜಕನಿಗೆ ಇರಬೇಕಾದ ಅರ್ಹತೆಗಳು

ಇಬ್ರಿಯ 5:1-10ರಲ್ಲಿ, ಮಹಾಯಾಜಕನಲ್ಲಿ ಇರಬೇಕಾದ ಅರ್ಹತೆಗಳನ್ನು ತಿಳಿಸಿ, ಆ ಎಲ್ಲಾ ಅರ್ಹತೆಗಳು ಯೇಸುವಿನಲ್ಲಿ ಇದ್ದವು ಎಂದು ತಿಳಿಸಿದೆ.[6] ನಮ್ಮ ಪಾಠದಲ್ಲಿ ಆ ಅರ್ಹತೆಗಳ ಕುರಿತ ಕೆಲವು ಉಪಾಯಗಳನ್ನು ನೀಡಲಾಗಿದೆ: (1) ಜನರಿಂದಲೇ ಉಂಟಾದ ಒಂದು ಕರೆ, (2) ಜನರಿಗಾಗಿ ಅನುಕಂಪ (3) ಮತ್ತು ಜನರ ಹೊರ*ತಾದ* ಆದೇಶ.

### ಭೂಲೋಕಕ್ಕೆ ಸಂಬಂಧಪಟ್ಟ ಮಹಾಯಾಜಕ (5:1-4)

(1) *ಜನರಿಂದಲೇ ಉಂಟಾದ ಒಂದು ಕರೆ.* ಮಹಾಯಾಜಕನು ಮನುಷ್ಯರೊಳಗಿಂದ ಆರಿಸಲ್ಪಟ್ಟವನಾಗಿದ್ದು ಮನುಷ್ಯರಿಗೋಸ್ಕರ ದೇವರ ಕಾರ್ಯಗಳನ್ನು ಜರುಗಿಸುವದಕ್ಕಾಗಿ ನೇಮಿಸಲ್ಪಡುತ್ತಾನಲ್ಲಾ. ದೇವದೂತನನ್ನು ಮಹಾಯಾಜಕನನ್ನಾಗಿ ಆಯ್ಕೆ ಮಾಡಲಿಲ್ಲ. ಯಾಜಕನು ಆರೋನನ ವಂಶದವನಾಗಿದ್ದು, ಲೇವಿಯ ಕುಲದವನೇ ಆಗಿರಬೇಕು.

(2) *ಅವನು ಜನರಿಗಾಗಿ ಅನುಕಂಪ ಹೊಂದಿರಬೇಕಿತ್ತು.* ಪಾಪಗಳಿಗಾಗಿ ಕಾಣಿಕೆಯನ್ನು ತರುವವರನ್ನು ಅವನು ಕರುಣಿಸಬೇಕಿತ್ತು (ವಚನ 2ಎ). ಕರುಣೆಯಿಲ್ಲದವನಾಗಿದ್ದರೆ ಅವನು ಅವರಿಗಾಗಿ ಉತ್ತಮ ಪ್ರತಿನಿಧಿಯಾಗುವ ಸಾಧ್ಯತೆಯಿರಲಿಲ್ಲ. ಅವನು ಕರುಣೆ ತೋರುವವನಾಗಿರಬೇಕಿತ್ತು ಯಾಕೆಂದರೆ (ವಚನ 1) ಅವನು ಜನರ ಪ್ರತಿನಿಧಿಯಾಗಿದ್ದು, ಆ ಜನರಂತೆ ನಿರ್ಬಲಾವಸ್ಥೆಯಲ್ಲಿದ್ದನು (ವಚನ 2ಬಿ). ಆದ್ದರಿಂದ ಪಾಪ ಪರಿಹಾರಕ ದಿನದಲ್ಲಿ ತನಗಾಗಿಯೂ, ತನ್ನ ಜನರಿಗಾಗಿಯೂ ಯಜ್ಞವನ್ನು ಸಮರ್ಪಿಸಬೇಕಿತ್ತು (ವಚನ 3).

(3) *ಜನರ ಹೊರತಾದ ಆದೇಶ.* ಅವನು ತನ್ನಿಂದ ಹೊರತು ಪಡಿಸಿ, ದೈವೀಕವಾಗಿ ನೇಮಿಸಲ್ಪಡಬೇಕಿತ್ತು (ವಚನ 4). ಅವನ ನೇಮಕವನ್ನು ವಿಧಿವತ್ತಾಗಿ ಮಾಡಬೇಕಿತ್ತು.

ಅವನು ಯಾಜಕ ವಂಶದವನೇ ಆಗಿರಬೇಕಿತ್ತು. ಕೆಲವು ಸಾರಿ ಅವನು ಇಸ್ರಾಯೇಲ್ಯನೇ ಆಗಿದ್ದು, ಕನಿಕರವುಳ್ಳವನಾಗಿದ್ದರೂ, ಯಾಜಕ ಸ್ಥಾನಕ್ಕೆ ಅನರ್ಹನಾಗುವ ಸಾಧ್ಯತೆಯಿತ್ತು.

**ಶ್ರೇಷ್ಟನಾದ ಮಹಾಯಾಜಕನು (5:5-10)**

ಯೇಸುವಿನಲ್ಲಿ ಮೂರು ಅರ್ಹತೆಗಳಿದ್ದವು ಮನುಷ್ಯರಿಂದ ನೇಮಿಸಲ್ಪಟ್ಟ ಯಾಜಕನಿಗಿಂತಲೂ, ಯೇಸುವಿನ ಅರ್ಹತೆಯು ಉತ್ಕೃಷ್ಟವಾಗಿತ್ತು.

ಇಲ್ಲಿರುವ ಇಬ್ರಿಯ ಪತ್ರಿಕೆಯ ಬರಹಗಾರನು ವಿರುದ್ಧವಾದ ಅರ್ಹತೆಗಳನ್ನೇ ಚರ್ಚಿಸಿರುವನು.

(3) *ಮನುಷ್ಯರಿಂದ ನೇಮಕಗೊಳ್ಳಲಿಲ್ಲ.* ಯೇಸು ತನ್ನನ್ನು ತಾನೇ ನೇಮಿಸಿ ಕೊಳ್ಳದೇ ದೈವೀಕವಾಗಿ ನೇಮಕಗೊಂಡಿದ್ದನು (ವಚನಗಳು 5, 6). ಬರಹಗಾರನು ಹಳೇ ಒಡಂಬಡಿಕೆಯಿಂದ ಎರಡು ಪುರಾವೆಗಳನ್ನು ನೀಡಿರುವನು (ಕೀರ್ತನೆ 2:7; 110:4). ಅದರಲ್ಲಿ ಆತನ ಪುತ್ರತ್ವ ಹಾಗೂ ಯಾಜಕ ವೃತ್ತಿಯನ್ನು ನೀಡಿರುವನು.

(2) *ಜನರಿಗಾಗಿ ಅನುತಾಪ ಪಡುತ್ತಾನೆ.* ಯೇಸು ಅನುಕಂಪವಿರುವ ಮಹಾಯಾಜಕನು (ವಚನಗಳು 7-10; 2:17; 4:14-16). "ಆತನು ಸರ್ವವಿಷಯದಲ್ಲಿ ನಮ್ಮ ಹಾಗೆ ಆದ್ದರಿಂದ, ನಮ್ಮ ನಿರ್ಬಲಾವಸ್ಥೆಯಲ್ಲಿ ನಮಗೆ ಸಹಾಯಕನಾಗಿದ್ದಾನೆ" (4:15). ಇದಕ್ಕೆ ಸಂಬಂಧಪಟ್ಟಂತೆ ಬರಹಗಾರನು ಶಿಲುಬೆಯನ್ನು ಹಾಗೂ ಗೆತ್ಸೇಮನೆ ತೋಟದ ವಿಚಾರವನ್ನು ತಿಳಿಸಿರುವನು. ಆತನು ದೇವರ ಮಗನಾಗಿದ್ದರೂ (5:5), ಅವನು ಬಾಧೆಪಪಟ್ಟು, ಅದರ ಪಾಠಗಳನ್ನು ಅರಿತನು (ವಚನ 8).

(1) *ಜನರಿಂದಲೇ ಕರೆಯಲ್ಪಟ್ಟವನು.* ಮನುಷ್ಯನಂತೆ ಯೇಸು ಹಿಂಸೆಯನ್ನು ಅನುಭವಿಸಿದನು (ವಚನ 7). ಈ ವಿಶೇಷವಾದ ಅರ್ಹತೆಯ ಮೂಲಕ ಯೇಸು ನಮ್ಮ ಪ್ರತಿನಿಧಿಯಾದನು (1 ತಿಮೊಥೆ 2:5).

## ಶ್ರೇಷ್ಠ ಮಹಾಯಾಜಕನು

ಮನುಷ್ಯರೊಳಗಿಂದ ನೇಮಿತವಾದ ಮಹಾಯಾಜಕನಿಗಿಂತಲೂ, ಉತ್ತಮವಾದ ಅರ್ಹತೆಯನ್ನು ಯೇಸು ಹೊಂದಿದ್ದನೆಂದು ನಮ್ಮ ಪಾಠದಲ್ಲಿ ತಿಳಿಸಲಾಗಿದೆ.

- ಆತನು ಆರೋನನ ಚೊಚ್ಚಲು ಮಗನಲ್ಲ, ಆದರೆ ಆತನು ದೇವರ ಮಗನು (5:5).
- ಪರಿಪೂರ್ಣನಾದ ಯಾಜಕನಾಗುವ ಸಕಲ ಅರ್ಹತೆಯನ್ನು ಹೊಂದಿರುವನು (5:9ಎ).
- ವಿಧೇಯರಿಗೆ "ನಿತ್ಯವಾದ ರಕ್ಷಣೆಯನ್ನು ನೀಡುವನು" (5:9ಎ). ಅದು ತಾತ್ಕಾಲಿಕ ವಾದ ಆರೋನನ ಯಜ್ಞದ ಕಾರ್ಯವಾಗಿರುವದಿಲ್ಲ.
- ಆತನು ನಮಗಾಗಿ ಮೆಲ್ಕಿಜೆದೇಕನಂತೆ ಶ್ರೇಷ್ಟ ಮಹಾಯಾಜಕನಾಗಿದ್ದಾನೆ (5:6, 10), ಅದರ ಅರ್ಥವೇನು? ಎಚ್ಚರಿಕೆ ಪಾಠದಲ್ಲಿ ಬರಹಗಾರನು ಅದನ್ನು ಚರ್ಚಿಸಿರುವನು.

ನಮ್ಮ ಮಹಾಯಾಜಕನಾದ ಯೇಸು *ಶ್ರೇಷ್ಟನೇ!*

## ಬೋಧಕರಿಗಾಗಿ ಟಿಪ್ಪಣಿ

ಹಳೆ ಒಡಂಬಡಿಕೆಯ ಮಹಾಯಾಜಕನು ಸಾಧಾರಣವಾದ ವಸ್ತುವನ್ನೇ ಧರಿಸುತ್ತಿದ್ದನು.

ಅವನು ಆ ಕಾರ್ಯ ನಿರ್ವಹಿಸುವಾಗ ವಿಶೇಷವಾದ ನೀಲಿ ಬಟ್ಟೆಯನ್ನು ಧರಿಸುತ್ತಿದ್ದನು (ವಿಮೋಚನಕಾಂಡ 28:31-35). ಪಾಪ ಪರಿಹಾರಕ ದಿನದಲ್ಲಿ ಅವನು ನಾರಿನ ಬಟ್ಟೆಯನ್ನು ಧರಿಸುತ್ತಿದ್ದನು (16:4, 11-23) ಅದು ಆ ದಿನಕ್ಕೆ ಮಾತ್ರ ಸೀಮಿತವಾಗಿತ್ತು.

---

ಟಿಪ್ಪಣಿಗಳು

[1]KJV ಯಲ್ಲಿ "ಮಹಾಯಾಜಕ" ಇಬ್ರಿಯ 10:21, ಎಂದಿದ್ದರೆ ಗ್ರೀಕ್‌ನಲ್ಲಿ ಶ್ರೇಷ್ಟ ಮಹಾಯಾಜಕ ಎಂದಿದೆ. [2]ಹಳೆ ಒಡಂಬಡಿಕೆಯಲ್ಲಿ "ಮಹಾಯಾಜಕ" (*gadol*) ಎಂಬ ಪದದಲ್ಲಿ "ಮಹಾ" ಎಂದು ಭಾಷಾಂತರಿಸಿದ ಪದಕ್ಕೆ "ಪ್ರಧಾನ" ಅರ್ಥ. ಹೊಸ ಒಡಂಬಡಿಕೆಯಲ್ಲಿ "ಮುಖ್ಯಯಾಜಕ" (*archiereus*) ಎಂದು ಭಾಷಾಂತರಿಸಿದ ಗ್ರೀಕ್ ಪದಕ್ಕೆ "ಪ್ರಧಾನ ಯಾಜಕ" ಎಂದು ಅರ್ಥ. ಯೇಸು ಮಾತ್ರವೇ "ಪ್ರಧಾನ [*megas*] ಮಹಾಯಾಜಕ [*archiereus*]." [3]ಮೊದಲ ಪಾಠದ ಮುಖ್ಯಾಂಶ ನೋಡಿರಿ. [4]ಚೊಚ್ಚಲು ಮಗನಲ್ಲಿ ನ್ಯೂನ್ಯತೆಯಿದ್ದರೆ, ಅವನು ಅನರ್ಹನು. [5]ದೇವರ ಚಿತ್ತವನ್ನು ಗ್ರಹಿಸಲು "ಊರೀಮ್" ಮತ್ತು "ತಮ್ಮೀಮ್" ಬಳಸುತ್ತಿದ್ದರು. [6]ಈ ಪಾಠದ ಚಾರ್ಟನ್ನು ನೋಡಿರಿ.

| ಯಾಜಕನ ಅರ್ಹತೆಗಳು | ಅರ್ಹತೆಗಳಿಗೆ ಕಾರಣ | ಯೇಸುವಿನಲ್ಲಿದ್ದ ಸತ್ಯಾಂಶ | ನಮಗಾಗಿರುವ ಫಲಿತಾಂಶ |
| --- | --- | --- | --- |
| ಮನುಷ್ಯರೊಳಗಿಂದ ಆಯ್ಕೆ (5:1) | ಜನರಿಗಾಗಿ ಯಜ್ಞಗಳನ್ನು ಸಮರ್ಪಿಸುವ ಪ್ರತಿನಿಧಿ | ಒಬ್ಬ ಮನುಷ್ಯ (5:7ಎ) | ಯೇಸು ನಮ್ಮ ಪ್ರತಿನಿಧಿ (1 ತಿಮೋಥೆ 2:5) |
| ಜನರಿಗಾಗಿ ಅನುಕಂಪ (5:2) | ಜನರ ಕೊರತೆ ಗಳನ್ನು ಅರ್ಥ ಮಾಡಿಕೊಂಡು, ದೇವರ ಪ್ರತಿ ನಿಧಿಯಾಗುವದು | ಅನುತಾಪ ಪಡುವ ಮಹಾಯಾಜಕ (5:7-10) | ಯೇಸು ನಮಗಾಗಿ ಚಿಂತಿಸುತ್ತಾನೆ (ಇಬ್ರಿಯ 4:14-16) |
| ಜನರಿಂದ ಆಯ್ಕೆ ಗೊಳ್ಳದವನು (5:4) | ದೇವರಿಂದ ನೇಮಿತ ವಾದ ಕೆಲಸ | ದೈವಿಕವಾದ ನೇಮಕ (5:5, 6) | ಯೇಸುವಿನ ಯಜ್ಞ ಅಂಗೀಕೃತವಾಗಿದೆ |